**ಓ.ಎಸ್. ನಂ. 434/2013 ಡಿ.ಡಬ್ಲೂ-1 ಹೆಸರು - ಶಿವಣ್ಣ ಎಂ.**

**ಸಾಕ್ಷಿಯನ್ನು ದಿನಾಂಕಃ 24/05/2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಕೆ.ಆರ್.ಜಿ. ವಾದಿ ಪರ ವಕೀಲರಿಂದಃ-**

ನಾನು ಪಿ.ಯು.ಸಿ. ವರೆಗೂ ಓದಿದ್ದೇನೆ. ನಮ್ಮ ಮನೆಯಿಂದ 1 ನೇ ಪ್ರತಿವಾದಿಯ ಮನೆಗೆ ಸುಮಾರು 200 ಮೀಟರ್ ಅಂತರ. 1 ನೇ ಪ್ರತಿವಾದಿಗೆ ಸುಮಾರು 40-50 ವರ್ಷಗಳಿಂದ ಮದ್ಯಪಾನದ ಚಟವಿತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿಗೆ 1 ನೇ ಪ್ರತಿವಾದಿಗೆ ಕುಡಿತದ ಚಟವಿತ್ತು ಎನ್ನುವುದು ಗೊತ್ತಿತ್ತು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಹೆಂಡತಿಯ ಹೆಸರು ಮಹದೇವಮ್ಮ ಎಂದರೆ ಸರಿ. ಸದರಿ ಮಹದೇವಮ್ಮ ಮಾನಸಿಕ ಅಸ್ವಸ್ತರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ 2 ನೇ ಹೆಂಡತಿ ಹೆಸರು ಮಹದೇವಮ್ಮ ಎಂದರೆ ನನಗೆ ಗೊತ್ತಿಲ್ಲ. 2 ನೇ ಹೆಂಡತಿಯ ಮಗಳ ಹೆಸರು ಕೃಷ್ಣವೇಣಿ ಅವರು ಈ ದಾವೆಯ 11 ನೇ ಪ್ರತಿವಾದಿ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಮೊದಲ ಹೆಂಡತಿ ಮಹದೇವಮ್ಮನಿಗೆ ಇಬ್ಬರು ಮಕ್ಕಳು ಅವರೇ ಈ ದಾವೆಯ ವಾದಿಗಳು ಎಂದರೆ ಸರಿ.

ದಾವಾ ಸ್ವತ್ತುಗಳು 1 ನೇ ಪ್ರತಿವಾದಿಯ ಸ್ವಂತ ಆಸ್ತಿಗಳಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು 1 ನೇ ಪ್ರತಿವಾದಿಯ ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಇರಬಹುದು. ನಿಡಿ-2 ಕ್ರಯ ಪತ್ರ ಮಾಡಿಕೊಳ್ಳುವ ಮುನ್ನ ಸರ್ವೆ ನಂಬರ್ 66 ಆಸ್ತಿ 1 ನೇ ಪ್ರತಿವಾದಿಯ ಪಿತ್ರಾರ್ಜಿತ ಸ್ವತ್ತೋ ಅಥವಾ ಸ್ವಯಾರ್ಜಿತ ಸ್ವತ್ತೋ ಎಂದು ನೀವು ತಿಳಿದುಕೊಳ್ಳಲು ಪ್ರಯತ್ನಿಸಿಲ್ಲ ಎಂದರೆ ಸಾಕ್ಷಿಯು ಸದರಿ ಸ್ವತ್ತು 1 ನೇ ಪ್ರತಿವಾದಿಯ ತಂದೆಯ ಸ್ವತ್ತು ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಗೆ ಎಷ್ಟು ಜನ ಹೆಂಡತಿ ಮಕ್ಕಳು ಎಂದು ನಾವು ತಿಳಿದುಕೊಂಡಿಲ್ಲ. ನಿಡಿ-2 ರಲ್ಲಿ ನಮೂದಿರುವ ಭೋಗ್ಯ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸರ್ವೆ ನಂಬರ್ 66 ರ ಸ್ವತ್ತಿಗೆ ಎಷ್ಟು ಜನ ಹಕ್ಕುದಾರರು ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈಗ ನನಗೆ ಓದಿ ಹೇಳಿದ ದಾಖಲೆಯಲ್ಲಿನ ಪುಟ್ಟಮಾದಮ್ಮ ಎಂದರೆ ನನ್ನ ತಾಯಿ. ಸದರಿ ದಾಖಲೆಯು ದಿನಾಂಕ 01.09.2001 ರ ನೊಂದಾಯಿತ ಭೋಗ್ಯ ಪತ್ರದ ದೃಡೀಕೃತ ನಕಲಾಗಿದ್ದುಎ ಅದನ್ನು ನಿಪಿ-58 ಎಂದು ಗುರುತಿಸಲಾಯಿತು. ನಿಪಿ-58 ರಲ್ಲಿ ಭೋಗ್ಯದ ವಾಯಿದೆಯನ್ನು 8 ವರ್ಷ ಎಂದು ನಮೂದಿಸಲಾಗಿದೆ ಎಂದರೆ ಸರಿ. ಈಗ ನನಗೆ ತೋರಿಸಿದ ಪತ್ರವು ನನ್ನ ತಾಯಿಯ ಹೆಸರಿಗೆ ಆಗಿರುವ ಭೋಗ್ಯ ಪತ್ರವಾಗಿರುತ್ತದೆ. ಸಾಕ್ಷಿಯು ದಾಖಲೆಯನ್ನು ನೋಡಿ ಗುರುತಿಸಿದ್ದರಿಂದ್ದಾಗಿ ದಿನಾಂಕ 22.04.2002 ರ ನೊಂದಾಯಿತ ಭೋಗ್ಯ ಪತ್ರದ ದೃಡೀಕೃತ ನಕಲನ್ನು ನಿಪಿ-59 ಎಂದು ಗುರುತಿಸಲಾಯಿತು. ನಿಪಿ-59 ರಲ್ಲಿ ಭೋಗ್ಯದ ವಾಯಿದೆಯನ್ನು 6 ವರ್ಷ ಎಂದು ನಮೂದಿಸಿಸಲಾಗಿದೆ ಎಂದರೆ ಸರಿ.

ನಿಪಿ-58, ನಿಪಿ-59 ಮತ್ತು ನಿಡಿ-2 ಪತ್ರಗಳನ್ನು ಮಾಡಿಸಿಕೊಳ್ಳುವ ಸಮಯದಲ್ಲಿ 1 ನೇ ಪ್ರತಿವಾದಿಯ ಇಬ್ಬರು ಹೆಂಡತಿಯರು ಮತ್ತು ಅವರ ಮಕ್ಕಳಾದ ವಾದಿಯರು ಮತ್ತು 11 ನೇ ಪ್ರತಿವಾದಿಯ ಒಪ್ಪಿಗೆಯನ್ನು ಪಡೆಯಲು ಸಮಸ್ಯೆ ಇತ್ತೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಮಗೆ 1 ನೇ ಪ್ರತಿವಾದಿಗೆ 1 ನೇ ಹೆಂಡತಿ ಮತ್ತು ಆಕೆಗೆ ಇರುವ ಇಬ್ಬರು ಮಕ್ಕಳುಗಳ ಬಗ್ಗೆ ಮಾತ್ರ ಗೊತ್ತಿತ್ತು 2 ನೇ ಪತ್ನಿ ಮತ್ತು 11 ನೇ ಪ್ರತಿವಾದಿಯ ಬಗ್ಗೆ

ನನಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ನಿಡಿ-2 ರಲ್ಲಿ ಹಿಂದಿನ ಭೋಗ್ಯದ ಸಾಲದ ತೀರುವಳಿ ಬಗ್ಗೆ ಮತ್ತು ಇತರೆ ವ್ಯವಹಾರದ ಖರ್ಚಿಗೆ ಎಂದು ಕ್ರಯ ಪತ್ರ ಬರೆದುಕೊಡುತ್ತಿದ್ದಾರೆ ಎನ್ನುವ ಒಕ್ಕಣೆ ಇದೆ ಎಂದರೆ ಸರಿ. ಭೋಗ್ಯದ ಅವಧಿ ಮುಕ್ತಾಯವಾಗಿರದ ಕಾರಣ ಭೋಗ್ಯದ ಸಾಲವನ್ನು ತೀರುವಳಿ ಮಾಡುವ ಅಗತ್ಯ 1 ನೇ ಪ್ರತಿವಾದಿಗೆ ಇರಲಿಲ್ಲ ಎಂದರೆ ಸರಿಯಲ್ಲ. ನಿಡಿ-2 ಕ್ರಯ ಪತ್ರ ಆಗುವಾಗ ನಾನು ಉಪನೊಂದಣಾಧಿಕಾರಿಗಳ ಕಛೇರಿಗೆ ಹೋಗಿರಲಿಲ್ಲ.

1 ನೇ ಪ್ರತಿವಾದಿ ಮತ್ತು 1 ನೇ ವಾದಿ ಭೋಗ್ಯ ತೀರುವಳಿ ಮಾಡಿಕೊಡಲು ಬಂದಾಗ ನಾವು ನಿಡಿ-2 ಕ್ರಯ ಪತ್ರವನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯ ಇಬ್ಬರು ಹೆಂಡತಿಯರು ಮತ್ತು ಮಕ್ಕಳು ಎಲ್ಲರೂ ಸೇರಿ ನಿಡಿ-2 ಕ್ರಯ ಪತ್ರವನ್ನು ಬರೆದು ಕೊಟ್ಟಿರದ ಕಾರಣ ನಮಗೆ ಸದರಿ ಸ್ವತ್ತಿನ ಮೇಲೆ ಯಾವುದೇ ಹಕ್ಕು ಮತ್ತು ಸ್ವಾಧೀನ ಬಂದಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಸರ್ವೆ ನಂಬರ್ 66 ರ ಸ್ವತ್ತು ನಮಗೆ ಸೇರಿದ್ದಲ್ಲ ಎಂದರೆ ಸರಿಯಲ್ಲ. ನಿಡಿ-2 , ನಿಪಿ-58 ಮತ್ತು ನಿಪಿ-59 ದಾಖಲಾತಿಗಳನ್ನು ಬರೆಸಿಕೊಳ್ಳುವ ಮುಂಚೆ ತಹಶೀಲ್ದಾರ್ ಕಛೇರಿಯಿಂದ 1 ನೇ ಪ್ರತಿವಾದಿಯ ಕುಟುಂಬದ ವಂಶವೃಕ್ಷ ಪಡೆಯಲು ತೊಂದರೆ ಇತ್ತೇ ಎಂದರೆ ಸಾಕ್ಷಿಯು 1 ನೇ ಪ್ರತಿವಾದಿ ಮತ್ತು ಅವರ ಮಗನ ಮೇಲೆ ವಿಶ್ವಾಸ ಇದ್ದುದರಿಂದ ನಾವು ವಂಶವೃಕ್ಷವನ್ನು ಪಡೆದಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಗೆ ಆತನ ಹೆಂಡತಿ ಮಕ್ಕಳನ್ನು ಕರೆದುಕೊಂಡು ಬಂದು ಪತ್ರ ಬರೆದುಕೊಡುವಂತೆ ಕೇಳಿಲ್ಲ. 1 ನೇ ಪ್ರತಿವಾದಿ ಮತ್ತು ಆತನ ಕುಟುಂಬಸ್ಥರಿಗೆ ಮೋಸ ಮಾಡುವ ಉದ್ದೇಶದಿಂದ ಈ ದಾಖಲಾತಿಗಳನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಡಿ-2 ರಲ್ಲಿ ನಮೂದಿಸಿರುವ ಸ್ವತ್ತಿನ ಮೇಲೆ ವಾದಿಯರು, ಪ್ರತಿವಾದಿ 1(ಎ) ಮತ್ತು ಪ್ರತಿವಾದಿ 11 ರವರಿಗೆ ಭಾಗಂಶದ ಹಕ್ಕು ಇದೆ ಎಂದರೆ ಸಾಕ್ಷಿಯು ನಮ್ಮ ಆಸ್ತಿಯಲ್ಲಿ ಭಾಗಂಶದ ಹಕ್ಕಿಲ್ಲ ಆದರೆ ನಂಜುಂಡನಾಯಕರ ಇತರೆ ಸ್ವತ್ತಿನ ಮೇಲೆ ಹಕ್ಕು ಇದೆ ಎಂದು ನುಡಿಯುತ್ತಾರೆ. ಕ್ರಯ ಪತ್ರ ಬರೆದು ಕೊಡುವ ಅಗತ್ಯ 1 ನೇ ಪ್ರತಿವಾದಿಗೆ ಇರಲಿಲ್ಲ, ನಾವು ದಾಖಲಾತಿಗಳನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ನಿಪಿ-11 ರಂತೆ ಪೌತಿ ಖಾತೆಯಂತೆ 1 ನೇ ಪ್ರತಿವಾದಿಗೆ ಅವರ ತಂದೆಯಿಂದ ಖಾತೆಯಾಗಿದೆ ಎಂದರೆ ಸರಿ. ನಿಡಿ-2, ನಿಪಿ-58 ಮತ್ತು ನಿಪಿ-59 ದಾಖಲಾತಿಗಳು ವಾದಿಯರಿಗೆ, 1 ನೇ ಪ್ರತಿವಾದಿಯ ಇಬ್ಬರು ಹೆಂಡತಿಯರಿಗೆ ಮತ್ತು 11 ನೇ ಪ್ರತಿವಾದಿಗೆ ಬದ್ದಪಡಿಸುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಎಂ.ಆರ್. ಪ್ರತಿವಾದಿ 1(ಎ) ಪರ ವಕೀಲರಿಂದಃ-**

ಪ್ರತಿವಾದಿ 1(ಎ) ಮಾನಸಿಕವಾಗಿ ಅಸ್ವಸ್ಥರು ಎಂದರೆ ಸರಿಯಲ್ಲ. ಆದ್ದರಿಂದ ಕ್ರಯ ಪತ್ರವು ಪ್ರತಿವಾದಿ 1(ಎ) ರವರಿಗೆ ಬದ್ಧಪಡಿಸುವುದಿಲ್ಲ ಎಂದರೆ ಸರಿಯಲ್ಲ.

( 11 ನೇ ಪ್ರತಿವಾದಿ ಮತ್ತು ಅವರ ಪರ ವಕೀಲರನ್ನು ಕರೆಸಲಾಯಿತು ಅವರು ಗೈರು ಹಾಜರು ಇರುತ್ತಾರೆ, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು. )

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

1 **ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**